# ಕನ್ನಡಕ್ಕೂ ರೆಡಿ



ಒಂದೆಡೆ ಕನ್ನಡ ಸಿನಿಮಾಗಳಲ್ಲಿ ಕನ್ನಡಿಗ ನಟಿಯರಿಗೆ ಸೂಕ್ತ ಪಾತ್ರಗಳು ಸಿಗುತ್ತಿಲ್ಲ ಎಂಬ ಕೂಗಿದೆ. ಇನ್ನೊಂದೆಡೆ ಬಾಲಿವುಡ್ ಸಹಿತ ಪರಭಾಷಾ ಬೆಡಗಿಯರು ಕನ್ನಡ ಸಿನಿಮಾಗಳಲ್ಲಿ ನಟಿಸಲು ಸಾಲುಗಟ್ಟಿ ನಿಂತಿದ್ದಾರೆ. ಈ ಕ್ಯೂಗೆ ಹೊಸ ಸೇರ್ಪಡೆ ಮುಗ್ಧಾ ಗೋಡ್ಸೆ.

'ಫ್ಯಾಷನ್' ಎಂಬ ಹಿಂದಿ ಚಿತ್ರದೊಂದಿಗೆ ನಟನಾ ವೃತ್ತಿ ಆರಂಭಿಸಿದ ಮುಗ್ಧಾ, ಮೊದಲ ಚಿತ್ರದಲ್ಲೇ ಭರ್ಜರಿ ಪ್ರಚಾರ ಪಡೆದಳು. ಈಗಲೂ ಆಕೆಯ ಕೈಯಲ್ಲಿ ಹೇಳಿಕೊಳ್ಳುವಂತಹ ಸಿನಿಮಾಗಳಿಲ್ಲ; ಆದರೆ ಆಕೆ ಪ್ರತಿನಿತ್ಯ ಸುದ್ದಿಯಲ್ಲಿರುತ್ತಾಳೆ. ಅದಕ್ಕೆ ಕಾರಣ ಆಕೆಯ ಮಾಡೆಲಿಂಗ್ ಹಿನ್ನೆಲೆ.

ಕಳೆದ ವಾರ ಬೆಂಗಳೂರಿಗೆ ಬಂದ ಮುಗ್ಧಾ, 'ಬೆಂಗಳೂರೆಂದರೆ ನನಗಿಷ್ಟ. ಕನ್ನಡ ಸಿನಿಮಾದಲ್ಲಿ ಉತ್ತಮ ಪಾತ್ರ ಸಿಕ್ಕರೆ ಖಂಡಿತ ನಟಿಸುತ್ತೇನೆ' ಎಂದಿದ್ದಾಳೆ. ಗಾಂಧಿನಗರದ ನಿರ್ಮಾಪಕರಿಗೆ ಇಷ್ಟು ಸೂಚನೆ ಸಿಕ್ಕಿಬಿಟ್ಟರೆ ಸಾಕು; ಶೀಘ್ರದಲ್ಲೇ ಈಕೆ ಕನ್ನಡಕ್ಕೆ ಎಂಟ್ರಿ ಕೊಟ್ಟರೂ ಆಶ್ಚರ್ಯವಿಲ್ಲ.

ಬೆಂಗಳೂರಿನಲ್ಲಿ 'ಲೈಫ್ ಸ್ಟೈಲ್' ಉತ್ಪನ್ನದ ಎರಡನೇ ಸರಣಿಯ ಪ್ರಚಾರ ರಾಯಭಾರಿಯಾಗಿ ಬಂದಿದ್ದಳು ಮುಗ್ಧಾ. 'ಮಾಡೆಲಿಂಗ್, ಸಿನಿಮಾ ಇವೆರಡರಲ್ಲಿ ಯಾವುದನ್ನು ಕಂಡರೆ ಹೆಚ್ಚು ಪ್ರೀತಿ?' ಎಂದು ಕೇಳಿದರೆ, 'ಎರಡೂ ಕ್ಷೇತ್ರಗಳು ನನಗೆ ಸಾಕಷ್ಟು ಕಲಿಸಿವೆ. ನಾನು ಸಿನಿಮಾವನ್ನು ಪ್ರೀತಿಸುತ್ತೇನೆ. ಹಾಗೆಯೇ ರ್‍ಯಾಂಪ್ ಮೇಲೆ ನಡೆಯುವುದನ್ನು ತಪ್ಪಿಸಿಕೊಳ್ಳಲು ಇಚ್ಛಿಸುವುದಿಲ್ಲ' ಎಂದು ಜಾಣ್ಮೆಯಿಂದ ಉತ್ತರಿಸಿದಳು.

ಮುಗ್ಧಾಳ ಫ್ಯಾಷನ್ ಪ್ರಜ್ಞೆ ಬೆರಗು ಹುಟ್ಟಿಸುವಂತಿದೆ. ನೋಡಲು ಅಷ್ಟೇನೂ ಸುಂದರಿಯಲ್ಲದ ಈಕೆ ತನ್ನ ಲುಕ್‌ನಿಂದಲೇ ಫೋಟೋಗ್ರಾಫರ್‌ಗಳನ್ನು ಸೆಳೆಯುವಲ್ಲಿ ಯಶಸ್ಸು ಪಡೆದಿದ್ದಾಳೆ. ಇದರ ಜತೆ ಬೋಲ್ಡ್ ಡ್ರೆಸ್‌ಗಳೂ ಈಕೆಯ ಜನಪ್ರಿಯತೆ ಹೆಚ್ಚಿಸಿವೆ. 'ನನಗೆ ಮಂಡಿಗಿಂತ ಕೆಳಗಿನ ಬಟ್ಟೆ ಧರಿಸುವುದೆಂದರೆ ಆಗಲ್ಲ. ಬಟ್ಟೆ ಮೊಣಕಾಲಿಗಿಂತ ಮೇಲೆಯೇ ಇರಬೇಕು. ಭಾರತೀಯ ಉಡುಗೆಯಲ್ಲಿ ಅನಾರ್ಕಲಿ ಡ್ರೆಸ್ ಇಷ್ಟ. ಯಾಕೆಂದರೆ ಅದರದ್ದು ಸಹಜ ನೋಟ' ಎಂದು ಬಿಡುಬೀಸಾಗಿ ಹೇಳಿದಳು ಈ ಬೆಡಗಿ.

ನೀತಾ ಲುಲ್ಲಾ– ನಿಶ್ಕಾ ಲುಲ್ಲಾ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನರೇಂದ್ರಕುಮಾರ್ ಈಕೆಯ ನೆಚ್ಚಿನ ವಸ್ತ್ರ ವಿನ್ಯಾಸಕರಂತೆ. ಅಂದ ಹಾಗೆ ಈಕೆ ಭಾರತದಲ್ಲಿ ಶಾಪಿಂಗ್ ಮಾಡುವುದೇ ಕಡಿಮೆಯಂತೆ! 'ಬಟ್ಟೆ ಖರೀದಿಗೆ ಲಂಡನ್ ಮತ್ತು ದುಬೈ ಉತ್ತಮ ಶಾಪಿಂಗ್ ಸ್ಥಳ. ನಾನು ಲಂಡನ್‌ನಲ್ಲಿ ಜಾಕೆಟ್ ಖರೀದಿಸುತ್ತೇನೆ. ದಿನನಿತ್ಯದ ಉಡುಗೆಗಳನ್ನು ಕೊಳ್ಳಲು ದುಬೈಗೆ ಹೋಗುತ್ತೇನೆ. ನನ್ನ ಬಳಿ ಹೊಸ ಮಾದರಿಯ ಬೆಲ್ಟ್, ರಿಂಗ್ಸ್, ಬ್ರೇಸ್‌ಲೆಟ್‌ಗಳಿವೆ. ಆದರೆ ಆ್ಯಂಟಿಕ್ ಆಭರಣ ಕೊಳ್ಳಲು ಮಾತ್ರ ನಮ್ಮ ಜೈಪುರ ಉತ್ತಮ ಸ್ಥಳ' ಎಂದು ಕೆನ್ನೆಯಲ್ಲಿ ಗುಳಿ ಬೀಳಿಸಿದಳು.

ಮುಗ್ಧಾಗೆ ಮುಖಕ್ಕೆ ಹೆಚ್ಚು ಬಣ್ಣ ಬಳಿದುಕೊಳ್ಳುವುದು ಇಷ್ಟವಾಗುದಿಲ್ಲವಂತೆ. 'ಸರಳ ಮೇಕಪ್ ಅಂದರೆ ನನಗಿಷ್ಟ. ಆದರೆ ಕಣ್ಣು ಮತ್ತು ಕೇಶಾಲಂಕಾರಕ್ಕೆ ವಿಶೇಷ ಪ್ರಾಧಾನ್ಯತೆ ನೀಡುತ್ತೇನೆ. ಪ್ರತಿ ಸಿನಿಮಾದಲ್ಲೂ ಹೊಸ ಸುಂಗಧ ದ್ರವ್ಯವನ್ನು ಬಳಸುವುದು ನನ್ನ ಹವ್ಯಾಸ. ಪ್ರತಿ ಪರಿಮಳದೊಂದಿಗೆ ನಾನು ಭಾವನಾತ್ಮಕ ಸಂಬಂಧ ಹೊಂದಿದ್ದೇನೆ' ಎಂದಳು.

ಸದ್ಯಕ್ಕೆ 'ಲಾಡ್ಲಾ' ಚಿತ್ರದ ರಿಮೇಕ್‌ನಲ್ಲಿ ಈಕೆ ನಟಿಸುತ್ತಿದ್ದಾಳೆ. '1994ರಲ್ಲಿ ಬಂದ ಸಿನಿಮಾವದು. ಆಗ ಶ್ರೀದೇವಿ ಮಾಡಿದ ಪಾತ್ರವನ್ನು ಈಗ ನಾನು ಮಾಡುತ್ತಿದ್ದೇನೆ. ಈ ಪಾತ್ರ ನಿಜಕ್ಕೂ ಚಾಲೆಂಜಿಂಗ್' ಎನ್ನುವುದು ಮುಗ್ಧಾ ಅನಿಸಿಕೆ.

■ ವಿದ್ಯಾ